ಅವರಿಗಿದ್ದ ಪ್ರೀತಿ ಗೌರವಗಳನ್ನು ನಾನು ಚೆನ್ನಾಗಿ ಬಲ್ಲೆ. ಆದ್ದರಿಂದಲೇ ಅವರ ಬರವಣಿಗೆಯ ಉತ್ತರಕಾಂಡವು ಸಾಮಾಜಿಕ ರಾಜಕೀಯ ಆಯಾಮಗಳನ್ನು ಪಡೆದುಕೊಂಡ ಬಗೆಯಲ್ಲಿ ಅಚ್ಚರಿಯೇನೂ ಇಲ್ಲ. ಅದು ಒಳಗೆ ಅಡಗಿದ್ದ ಕಾಳಜಿಗಳ ಅಭಿವ್ಯಕ್ತಿಯಷ್ಟೇ. ಒಂದು ಕಡೆ ಕುವೆಂಪು–ಕಾರಂತ ಮತ್ತು ಇನ್ನೊಂದು ಕಡೆ ಅಡಿಗ–ಅನಂತಮೂರ್ತಿ ಎಂಬ ವಿಭಿನ್ನ ಸೆಳೆತಗಳಿಂದ ಆಕರ್ಷಿತನಾದ ಈ ತರುಣನಿಗೆ ಲೋಕದರ್ಶನ ಮತ್ತು ಸಾಹಿತ್ಯದರ್ಶನಗಳ ನಡುವೆ ವಿಚಿತ್ರವಾದ ಕರ್ಷಣ ಏರ್ಪಟ್ಟಿತು. ನಿಡುಗಾಲದ ಸಂಗಾತಿಯಾಗಿದ್ದ ಪೂರ್ಣಚಂದ್ರ ತೇಜಸ್ವಿಯವರ ವ್ಯಕ್ತಿತ್ವವೂ ಅವರ ಬದುಕನ್ನು ರೂಪಿಸಿತು. ಕೊನೆಯವರೆಗೂ ಅವರಿಗೆ ಈ ಕರ್ಷಣಗಳಿಂದ ಸಂಪೂರ್ಣ ಬಿಡುಗಡೆ ಸಿಗಲಿಲ್ಲ. ಇವೆಲ್ಲದರ ಫಲವಾದ ವೈಯಕ್ತಿಕ/ಸಾಹಿತ್ಯಕ ನೆಲೆಗಳನ್ನು ಅವರ ಬರವಣಿಗೆಯ ಹಿನ್ನೆಲೆಯಲ್ಲಿ ನೋಡುವುದು ನನ್ನ ಉದ್ದೇಶ. ನನ್ನ ಪೀಳಿಗೆಯಲ್ಲೂ ಹಲವರು ಇಂತಹ ಸವಾಲುಗಳನ್ನು ಎದುರಿಸಿ ಬೇರೆ ಬೇರೆ ಹಾದಿಗಳನ್ನು ತುಳಿದವರೇ.

ಮೊದಲನೆಯದಾಗಿ ಅವರು ನವ್ಯಸಾಹಿತ್ಯದ ಚೌಕಟ್ಟಿನಲ್ಲಿ ಬಂದರೂ ಕನ್ನಡಸಾಹಿತ್ಯ ಪರಂಪರೆಯ ನಿಕಟ ಪರಿಚಯವಿದ್ದ ಕೆಲವೇ ಕೆಲವು ವಿಮರ್ಶಕರಲ್ಲಿ ಒಬ್ಬರು. ಇಂಗ್ಲಿಷ್ ಪ್ರಾಧ್ಯಾಪಕರಲ್ಲದ ಅವರು ಹಳಗನ್ನಡ ನಡುಗನ್ನಡ ಕಾವ್ಯಗಳ ಇರುವಿಕೆ ಮತ್ತು ಮಹತ್ವಗಳನ್ನು ನಿರಾಕರಿಸಿದವರಲ್ಲ. ಹಾಗೆಂದು ಜಿ.ಎಸ್. ಶಿವರುದ್ರಪ್ಪನವರಂತೆ ನವ್ಯದ ಜೊತೆಗೆ ಉಗುರುಬೆಚ್ಚಗಿನ ಸಂಬಂಧವನ್ನು ಹೊಂದದೆ, ಅದರೊಳಗಿದ್ದೇ ಅದರಿಂದ ಭಿನ್ನವಾದರು. ಅಷ್ಟೇ ಅಲ್ಲ, ಇಂಗ್ಲಿಷ್ ಮತ್ತು ಇತರ ಯೂರೋಪಿಯನ್ ಭಾಷೆಗಳಲ್ಲಿ ಮೂಡಿಬಂದ ತಾತ್ವಿಕತೆ ಮತ್ತು ಸಾಹಿತ್ಯಕ ಉಪಕರಣಗಳನ್ನು ಅಷ್ಟೊಂದು ವ್ಯಾಪಕವಾಗಿ ಗ್ರಹಿಸಲೂ ಇಲ್ಲ, ಬಳಸಲೂ ಇಲ್ಲ. ಅಂತೆಯೇ ನವ್ಯರು ನೆಚ್ಚಿಕೊಂಡ ತಾತ್ವಿಕತೆಯೆಂದು ಹೇಳಲಾದ ಮಾರ್ಕ್ಸ್‌ವಾದ, ಅಸ್ತಿತ್ವವಾದ, ಸಮಾಜವಾದಗಳೂ ಅವರನ್ನು ಆವರಿಸಲಿಲ್ಲ. ಅವರಿಗೆ ಅಂದೂ ಎಂದೂ ಗಾಂಧಿ ಮತ್ತು ಅಂಬೇಡ್ಕರ್ ಅವರೇ ಹತ್ತಿರವಾಗಿದ್ದರು. ಲೋಹಿಯಾ ಚಿಂತನೆಯ ಕಡೆಗೆ ಅವರಿಗೆ ವಿಶೇಷ ಒಲವು ಇರಲಿಲ್ಲ. ಆದೂ ಅಲ್ಲದೆ ನವ್ಯರ ಆಲೋಚನೆಯ ಫಲವೆಂದು ಹೇಳಲಾದ 'ವಿಶೃಂಖಲ ಜೀವನಕ್ರಮ'ವೂ ಅವರಿಗೆ ಸಹಜವೆನಿಸಲಿಲ್ಲ. ಆದ್ದರಿಂದಲೇ ಅವರು ನವ್ಯರ ನಡುವೆ, 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎನ್ನುವಂತೆ ಬದುಕಿ, ಹಾಗೆಯೇ ಬರೆದವರು. ಆದರೂ ಅವರನ್ನು ಕೆಲವು ನವ್ಯ ಲೇಖಕರು 'ಬಳಸಿಕೊಂಡರು'. ನಾಯಕರು ಅದನ್ನು ಗ್ರಹಿಸಲಾರದಷ್ಟು ಮುಗ್ಧರೂ ಪ್ರಾಮಾಣಿಕರೂ ಆಗಿದ್ದರು. ಈ ಕಾರಣಗಳಿಂದ ಅವರಿಗೆ 'ನವ್ಯ ವಿಮರ್ಶಕ' ಎಂದು ಹಣೆಪಟ್ಟಿ ಕಟ್ಟುವ ಅಗತ್ಯವೇನೂ ಇಲ್ಲ.

ನಾಯಕರು ವಿಮರ್ಶೆಯಲ್ಲಿ ವಿನಯ ಮತ್ತು ನಿಷ್ಠುರತೆಗಳ ಅಗತ್ಯವನ್ನು ಎತ್ತಿ ಹಿಡಿದವರು. ಅವರು ಹೊಸಗನ್ನಡ ವಿಮರ್ಶೆಯ ಪರಿಭಾಷೆಯನ್ನು ರೂಪಿಸಲು ಪ್ರಯತ್ನಿಸಿದವರೂ ಹೌದು. ಬರೆದಿದ್ದು ಸ್ಪಷ್ಟವಾಗಿಯೂ ಇರಬೇಕು, ಸಂಗ್ರಹವಾಗಿಯೂ ಇರಬೇಕು ಎಂದು ನಂಬಿದವರು. ಓದುಗರು ತಮ್ಮದೇ ಆದ ರೀತಿಯಲ್ಲಿ ಓದಿಕೊಳ್ಳುವ ಸಾಧ್ಯತೆಯನ್ನು ಗಮನಿಸದೆ, ತಾನು ಹೇಳುತ್ತಿರುವುದೇ ಸರಿಯಾದ 'ಒಂದೇ ಅರ್ಥ' ಎಂದು ಹೇಳಿದವರು. ಅದಕ್ಕಾಗಿ ವಾಗ್ವಾದ ಮಾಡಲು ಸದಾ ಸನ್ನದ್ಧರಾಗಿರುತ್ತಿದ್ದರು. ನಾಯಕರು ಸಂದಿಗ್ಧವಲ್ಲದ ಆದರೂ ಸಂಕೀರ್ಣವಾದ ಭಾಷೆಯನ್ನು ಬಳಸಿದವರು. ರೂಪಕಮಯವಾದ ಬರವಣಿಗೆಯು 'ಮಿಸ್ ಲೀಡಿಂಗ್' ಆಗುವುದೆಂದು ಅತ್ತ ಕಡೆ ಒಲಿಯಲಿಲ್ಲ. ಇಂಥ ಬರವಣಿಗೆಯ ಓದು, ಪೂರ್ವಸಿದ್ಧತೆ ಹಾಗೂ ಏಕಾಗ್ರತೆಯನ್ನು ಬಯಸುತ್ತದೆ. ಇದು ಕತ್ತಿಯಂಚಿನ ನಡಿಗೆ. ಇದು ಆಕ್ರಮಣಶೀಲವಾಗಿರುವುದಿಲ್ಲ. ಆದ್ದರಿಂದಲೇ ಓದುಗರ ಮನಸ್ಸನ್ನು ಆವರಿಸಿಬಿಡುವುದಿಲ್ಲ. ಇದು ಸಾಹಿತ್ಯಕೃತಿಯ, ಅದರಲ್ಲಿಯೂ ಕಾವ್ಯದ ಒಳಗುಟ್ಟುಗಳನ್ನು ಗ್ರಹಿಸಲು ಅಗತ್ಯವಾದ ಸಂವೇದನಾಶೀಲತೆಗೆ ಎರವಾಗುತ್ತದೆ. ಭಾವಲೋಕ ಮತ್ತು ಪ್ರತಿಮಾಲೋಕಗಳು ತರ್ಕದ ನಿಲುಕಿಗೆ ಸಿಗುವುದಿಲ್ಲ. ನವ್ಯರು ನಡೆಸಿದ ಅರ್ಥದ ಶೋಧನೆಗೂ 'ಕಾವ್ಯದ ಸಂವಹನ'ಕ್ಕೂ ನಿಕಟ ಸಂಬಂಧವೇನೂ ಇಲ್ಲ. ಕೆಲವು ಸಲ 'ನಾನೆ ಸರಿತನ'ವು ನೇಣುಹಗ್ಗವಾಗಿಬಿಡುತ್ತದೆ.

ಜಿ.ಎಚ್.ಎನ್. ಅವರ ಬದುಕು ಬರಹಗಳು ಹಲವು ಕರ್ಷಣಗಳಿಂದ ತುಂಬಿದ್ದವೆಂದು ಹೇಳಿದೆ. ಅವುಗಳಲ್ಲಿ ಮೊದಲನೆಯದು, ಸಾಹಿತ್ಯವನ್ನು ಕೇವಲ